ಮಂಜೂರಾದ, ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿಯಿರುವ ಹುದ್ದೆಗಳ ವಿವರಗಳನ್ನು ಈ ಕೆಳಕಂಡಂತೆ ವರ್ಗವಾರು ನೀಡಿದೆ.

ವೃಂದ	ಮಂಜೂರಾದ ಹುದ್ದೆಗಳ ಸಂಖ್ಯೆ	ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ	ಖಾಲಿ ಇರುವ ಹುದ್ದೆಗಳ ಸಂಖ್ಯೆ
ಗ್ರೂಪ್ 'ಎ'	31	05	26
ಗ್ರೂಪ್ 'ಬಿ'	32	14	18
ಗ್ರೂಪ್ 'ಸಿ'	575	134	441
ಗ್ರೂಪ್ 'ಡಿ'	1087	291	796
ಒಟ್ಟು	**1725**	**444**	**1281**

ಕೃಷಿ ಉಪಕರಣಗಳನ್ನು ಬಾಡಿಗೆಗೆ ನೀಡುವುದು

5317 (5736); ಡಾ॥ ಅಜಯ್ ಸಂಗ್ (ಜೇವರ್ಗಿ)

ಅ) ಕಲಬುರಗಿ ಜಿಲ್ಲೆಯಲ್ಲಿ ಬಾಡಿಗೆ ಆಧಾರದ ಮೇಲೆ ರೈತರಿಗೆ ಕೃಷಿ ಉಪಕರಣಗಳನ್ನು ನೀಡಲು ಮಂಜೂರಾದ ಕೇಂದ್ರಗಳೆಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

ಆ) ಜೇವರ್ಗಿ ತಾಲ್ಲೂಕಿನಲ್ಲಿ ಯಾವ ಯಾವ ಉಪಕರಣಗಳನ್ನು ಒದಗಿಸಲಾಗಿದೆ;

ಇ) ಯಾವ ಆಧಾರದ ಮೇಲೆ ಬಾಡಿಗೆ ನಿಗದಿಪಡಿಸಲಾಗಿದೆ; ಇದರ ಮಾನದಂಡವೇನು;

ಈ) ಈ ಯೊಜನೆಯಲ್ಲಿ ರೈತರಿಗೆ ಸಮರ್ಪಕವಾಗಿ ಕೃಷಿ ಉಪಕರಣಗಳನ್ನು ನೀಡದೆ ಅವ್ಯವಹಾರ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ರೈತರು ಉಪಕರಣಗಳನ್ನು ಬಾಡಿಗೆಗೆ ನೀಡಲು ಮುಂದಾದಲ್ಲಿ ಸರ್ಕಾರವು ಅವಕಾಶ ನೀಡುವುದು;

ಶ್ರೀ ಕೃಷ್ಣಬೈರೇಗೌಡ (ಕೃಷಿ ರಾಜ್ಯ ಸಚಿವರು)

ಅ) ಕಲಬುರಗಿ ಜಿಲ್ಲೆಯಲ್ಲಿ ಬಾಡಿಗೆ ಆಧಾರದ ಮೇಲೆ ರೈತರಿಗೆ ಕೃಷಿ ಉಪಕರಣಗಳನ್ನು ನೀಡಲು ಒಟ್ಟು 04 ಕೃಷಿ ಯಂತ್ರಧಾರೆ ಕೇಂದ್ರಗಳನ್ನು (ಕೃಷಿ ಯಂತ್ರೋಪಕರಣಗಳ ಬಾಡಿಗೆ ಆಧಾರಿತ ಸೇವಾ ಕೇಂದ್ರ) ಮಂಜೂರು ಮಾಡಲಾಗಿರುತ್ತದೆ.

ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿದೆ:

ಕ್ರ. ಸಂ.	ತಾಲ್ಲೂಕು	ಕೃಷಿ ಯಂತ್ರಧಾರೆ ಕೇಂದ್ರಗಳ (ಸಂಖ್ಯೆ)
1	ಅಫಜಲಪೂರೆ	1
2	ಆಳಂದ	1
3	ಚಿತ್ತಾಪೂರ	1
4	ಕಲಬುರಗಿ	1
	ಒಟ್ಟು	4

ಆ) ಜೇವರ್ಗಿ ತಾಲ್ಲೂಕಿನಲ್ಲಿ ಪ್ರಥಮ ಹಂತದಲ್ಲಿ ಕೃಷಿ ಯಂತ್ರ ಧಾರೆ ಕೇಂದ್ರವನ್ನು ಪ್ರಾರಂಭಿಸಲಾಗಿರುವುದಿಲ್ಲ.

ಇ) ಜಿಲ್ಲಾ ಮಟ್ಟದಲ್ಲಿ ಯೋಜನೆಯ ಅನುಷ್ಠಾನ, ಉಸ್ತುವಾರಿಗಾಗಿ ಹಾಗೂ ಬಾಡಿಗೆ ದರ ನಿಗದಿಪಡಿಸಲು ಜಿಲ್ಲಾ ಪಂಚಾಯತ್ ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಿರುವ

ಸಮಿತಿಯಲ್ಲಿ ಚರ್ಚಿಸಿ ಸ್ಥಳೀಯವಾಗಿ ಪ್ರಚಲಿತವಿರುವ ದರಗಳಿಗಿಂತ ಕಡಿಮೆ ಬಾಡಿಗೆ ದರವನ್ನು ನಿಗದಿಪಡಿಸಲಾಗುತ್ತಿದೆ.

ಈ) ರೈತರಿಗೆ ಸಮರ್ಪಕವಾಗಿ ಕೃಷಿ ಉಪಕರಣಗಳನ್ನು ನೀಡದೆ ಅವ್ಯವಹಾರ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಉ) ಪ್ರಸ್ತುತ ಕೃಷಿ ಯಂತ್ರಧಾರೆ (ಕೃಷಿ ಯಂತ್ರೋಪಕರಣಗಳ ಬಾಡಿಗೆ ಆಧಾರಿತ ಸೇವಾ) ಕೇಂದ್ರಗಳನ್ನು ಚಾರಿಟೇಬಲ್ ಟ್ರಸ್ಟ್) ಸರ್ಕಾರೇತರ ಸಂಸ್ಥೆಗಳ ಮುಖಾಂತರ ಸ್ಥಾಪನೆ ಮಾಡಲಾಗುತ್ತಿದ್ದು, ರೈತರು ಉಪಕರಣಗಳನ್ನು ಬಾಡಿಗೆಗೆ ನೀಡಲು ಮುಂದಾದಲ್ಲಿ ಅವರಿಗೆ ನೀಡಲು ಅವಕಾಶ ಇರುವುದಿಲ್ಲ.

ಫೈನಾನ್ಸ್ ಮತ್ತು ಲೀಸ್‌ಗಳಲ್ಲಿ ಲೇವಾದೇವಿನಡಿ ಬಡ್ಡಿ ವಿಧಿಸುವುದು

5318 (5737); ಶ್ರೀ ಅಜಯ್ ಸಿಂಗ್ (ಜೇವರ್ಗಿ)

ಅ) ರಾಜ್ಯದಲ್ಲಿ ಫೈನಾನ್ಸ್ ಮತ್ತು ಲೀಸ್ ಫೈನಾನ್ಸ್‌ಗಳಲ್ಲಿ ಮಿತಿ ಮೀರಿದ ಬಡ್ಡಿ ವಿಧಿಗೆ ಬಡವರು ಮತ್ತು ಕೂಲಿ ಜೀವನ ಮಾಡುತ್ತಿರುವವರಿಗೆ ಶೋಷಣೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸರ್ಕಾರದ ಅನುಮತಿ ಪಡೆಯದೆ ಚೀಟಿ ವ್ಯವಹಾರ ದ್ವಿಚಕ್ರ ಮತ್ತು ಇತರೆ ವಾಹನಗಳಿಗೆ ಹಣಕಾಸಿನ ನೆರವು ನೀಡಿ ಹೆಚ್ಚಿನ ಬಡ್ಡಿ ವಿಧಿಸಿ ತೊಂದರೆ ಕೊಡುತ್ತಿರುವುದರಿಂದ ಅವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ;

ಇ) ಯಾವ ಯಾವ ಜಿಲ್ಲೆಗಳಲ್ಲಿ ಉಪನಿಬಂಧಕರು ಮತ್ತು ಇತರೆ ಅಧಿಕಾರಿಗಳು ದಾಳಿ ನಡೆಸಿ ಕ್ರಮ ಕೈಗೊಂಡಿದ್ದಾರೆ (ವಿವರ ನೀಡುವುದು);